<u>ಸಾಕ್ಷಿಯನ್ನು ದಿಃ 26.03.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ</u>

ಈ ದಿನ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ವಿಷಯಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ಅದಕ್ಕೆ ನನ್ನ ಸಹಿ ಇರುತ್ತದೆ.

ಒಂದು ಮೂಲ ಪಾನ್ ಟಿಕೆಟ್ ಅನ್ನು ಹಾಜರು ಪಡಿಸಿದ್ದು ನಿಪಿ. 1 ಎಂದು,
ಗಿರಿವಿದಾರರ ಪರವಾನಗಿಯ ನೋಟರಿಕೃತ ಪ್ರತಿ ಹಾಜರು ಪಡಿಸಿದ್ದು ನಿಪಿ. 2 ಎಂದು,
ಪ್ರ.ವ.ವರದಿಯ ದೃಢೀಕೃತ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಪಿ. 3 ಎಂದು,
ದೂರಿನ ದೃಢೀಕೃತ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಪಿ. 4 ಎಂದು,
ಕ್ರೈಂ. ನಂ. 45/2024 ರ ಆದೇಶ ಪುಟಗಳ ದೃಢೀಕೃತ ನಕಲು, ಕಲಂ 480 BNSS, 503 BNSS ಅಡಿಯ ಅರ್ಜಿಗಳ ಹಾಗೂ ಆದೇಶದ ದೃಢೀಕೃತ ನಕಲುಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ. 5 ಎಂದು,
ವಕೀಲರ ನೋಟೀಸ್ ಹಾಜರು ಪಡಿಸಿದ್ದು ಅದನ್ನು ನಿಪಿ. 6 ಎಂದು,
ಎರಡು ಅಂಚೆ ರಶೀದಿಗಳನ್ನು ಹಾಜರು ಪಡಿಸಿದ್ದು ನಿಪಿ. 6(ಎ) ಮತ್ತು 6(ಬಿ) ಎಂದು,
ಎರಡು ಹಿಂತಿರುಗಿ ಬಂದ ಅಂಚೆ ಲಕೋಟೆಯನ್ನು ಹಾಜರು ಪಡಿಸಿದ್ದು ನಿಪಿ. 7 ಮತ್ತು ನಿಪಿ. 8 ಎಂದು,
ಅವುಗಳನ್ನು ತೆರೆದು ನೋಡಲಾಗಿ ಅದರೋಳಗಿರುವ ನೋಟೀಸ್ ಗಳ ಪ್ರತಿಗಳನ್ನು ನಿಪಿ. 7(ಎ) ಮತ್ತು ನಿಪಿ.8(ಎ) ಎಂದು ಗುರುತಿಸಲಾಯಿತು. ಅದುದರಿಂದ ನಾನು ಕೋರಿರುವಂತೆ ದಾವೆಯನ್ನು ಡಿಕ್ರಿ ಮಾಡಬೇಕಾಗಿ ಪ್ರಾರ್ಥಿಸುತ್ತೇನೆ.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ಪ್ರತಿವಾದಿ ಹಾಗೂ ಅವರ ಪರ ವಕೀಲರನ್ನು ಕೂಗಿ ಕರೆಯಿಸಲಾಗಿ ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮೈಸೂರು.